ದಿನಾಂಕಃ **22.4.2026** ಎಂ.ವಿ.ಸಿ. ನಂಃ **180/2025** ಆರ್ ಡಬ್ಲೂಃ **1**

**ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ 2 ನೇ ಎದುರುದಾರರ ಪರವಾಗಿ ಶ್ರೀ ಕೆ ಪಿ ಆರ್ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅವುಗಳ ಬಗ್ಗೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿರುತ್ತವೆ.

**ಪಾಟೀ ಸವಾಲು ಅರ್ಜಿದಾರರ ಪರವಾಗಿ ಶ್ರೀ ಕೆ ಎನ್ ಕೆ ವಕೀಲರಿಂದ**

ಎಫ್ ಐ ಆರ್ ಬಸ್ ಚಾಲಕನ ವಿರುದ್ದ ದಾಖಲಾಗಿದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನಾನು ಬಸ್ಸನ್ನು ಚಾಲನೆ ಮಾಡುತ್ತಿದ್ದೆ ಎಂದರೆ ಸರಿ. ಪೋಲೀಸರು ತನಿಖೆ ಮಾಡಿ ನನ್ನ ವಿರುದ್ದ ಚಾರ್ಜ್ ಶೀಟ್ ಸಲ್ಲಿಸಿದ್ದಾರೆ ಎಂದರೆ ಸರಿ . ಅರ್ಜಿದಾರರಿಗೆ ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳಲು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಅಪಘಾತವು ನನ್ನ ತಪ್ಪಿನಿಂದ ಆಗಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**